


ಈ ಚಕ್ರ ಬದಲಾಗಬೇಕಿತ್ತ...ss? ಎರಡೂ ಸರ್ತಿ ನಾವೇ ಚಕ್ರಕ್ಕ ಸಿಗಿಬಿಳೋದಂದ್ರ ಯಾವ ನ್ಯಾಯ? ಸಾಧ್ಯ ಇತ್ತಂದ್ರ ಅಪ್ಪ್ಯಾನ ಲಗ್ನಾಗತನಕ ನಾನು 'ಈ ಕಾಲಚಕ್ರಕ್ಕ ರೆಸ್ಟ್ ಕೊಟ್ಟುಬಿಡತಿದ್ದೆ' ನನ್ನೊಳಗಿನ ಸಂತ್ರಸ್ತೆ ದುಃಖಿಸುತಿದ್ದಳು, ರೆಬಲ್ ಆಗತಿದ್ದಳು.

ಅಶೋಕ ಬಂದಾಗ ನನ್ನೆಲ್ಲಾ ಸಂಕಟ ಹೇಳಿಕೊಂಡೆ. ನನ್ನ ಕಣ್ಣೀರ ಕೋಡಿಗೆ ಕರಗಿಬಿಟ್ಟ. 'ಅಕ್ಕಾ ಬ್ಯಾಸರಾಗಬ್ಯಾಡ. ಒಂದು ಗಂಡಿಗಿ ಒಂದ್ ಹೆಣ್ಣಂತ ಬ್ರಹ್ಮ ಹುಟ್ಟಿಸಿರ್ತಾನ, ಅಪ್ಪ್ಯಾನ ಫೋಟೊ, ವಾಟ್ಸಾಪಿಗೆ ಕಳ್ಸು' ಅಂದ. ಫೋಟೋ ನೋಡಿ 'ಇದೇನss..? 'ಕಾಣೆಯಾದವರು' ಅಂತ ಪೇಪರಿನಾಗ ಕೊಟ್ಟಂಗಾದಲ್ಲ. ನಾಳೆ ಅವನಿಗೆ ಮನಿಕಡಿ ಕಳಿಸು. ಛಂದಾಗಿ ಗಾಗಲ್ ಹಾಕಿಸಿ, ಯಾರದರ ಭಾರಿ ಕಾರ್ ಮುಂದ, ಮಾಲ್ ನಾಗ ಸ್ಟೈಲಿಶ್ ಫೋಟೊ ತೆಗಸ್ತೀನಿ. ಆಗ ಹೆಣ್ಣಿನವರು ಹೆಂಗ ಒಪ್ಪತಾರ ನೀನೇ ನೋಡು' ಅಂದ. ಅಶೋಕನ ಭರವಸದ ಮಾತಿಗಿ ನಂಗೂ ಧೈರ್ಯ ಬಂತು. ರಾತ್ರಿ ಗಾಢ ನಿದ್ದಿ. ಕನಸಿನ್ಯಾಗ ಅಪ್ಪ್ಯಾನ ಹೆಂಡತಿ ನನ್ನ ಕಾಲು ಒತ್ತತ್ತಿದ್ಲು. ನಾನು ಸೊಸಿಲಿಂದ ಸೇವಾಸುಖ ಅನುಭವಿಸುತ್ತಿದ್ದೆ.

ಗೆಳತಿ ಹೇಳಿದವರೊಬ್ಬರು ಬಂದಿದ್ರು. ಫಳಾರ, ಚಹಾ ಆಯ್ತು. ಹುಡುಗ ಹುಡುಗಿ ಪರ್ಸನಲ್ ಮಾತಾಡಲಂತ ಹೇಳಿದ್ರು. ಒಂದರ್ಧ ತಾಸು ಮಾತಾಡಿದ್ರು. ನಾವೂ ಹುಡುಗಿ ಪಸಂದ್ ಬಂದಾಳಂತ ಹೇಳಿದ್ವಿ. ಮರದಿನ ಹುಡುಗಿ ತಾಯಿ ಫೋನ್ ಮಾಡಿ 'ನನ್ನ ಮಗಳಿಗೆ ನಿಮ್ಮ ಮಗ ಏನಂದಾನ್ರೀ...? ಒಂದೇಸಮಾ ಅಳ್ಳಿಕತ್ತಾಳ. ಕಣ್ಣೀರು ನಿಂದ್ರವಲ್ಲು. ನಿಮ್ಮ ಮಗನಿಗೆ ಫೋನ್ ಕೊಡ್ರಿ. ಏನಂದಾನಂತ ನಾ ಕೇಳ್ತೀನಿ' ಅಂದಾಗ ಹೌಹಾರಿದೆ. ಏನಂದಿರಬೇಕು ಇವ... ಕೆಟ್ ಅಪೇಶಿ, ಅಂಜುಬುರಕ, ಪೇಶಂಟಿಗಿ ಇಂಜೆಕ್ಷನ್ ಕೊಡದೇ ದೊಡ್ಡಮಾತದ. ಮನ್ಯಾಗೆ ಗಡಗಡ ಮಾತಾಡಂಗಿಲ್ಲ. ಅಂತಾದ್ರಾಗ..? 'ನೋಡ್ರಿ ನನ್ ಮಗ ಅಂಥಾವಲ್ಲ. ಕೆಟ್ಟ ಸಂಭಾವಿತ. ನಿಮ್ ಹುಡುಗಿಗೇ ಈ ಸಂಬಂಧ ಮನಸ್ಸಾದಿಲ್ಲೋ... ಆಕಿ ಯಾರಿಗರ ಪ್ರೀತಿ ಮಾಡ್ಯಾಳೇನೋ. ಅದಕ್ಕ ಅಳ್ತಿರಬೇಕು' ಅಂತ ಝುಬರಿಸಿದೆ. ಆಮ್ಯಾಲ ಅಲ್ಲಿಂದ ಸುದ್ದಿಲ್ಲಾ.

ಅಮೇರಿಕಾದ ತಂಗಿ ಮಗಳು ಅಣ್ಣನ ಹುಟ್ಟುಹಬ್ಬಕ್ಕ ಆನ್‌ಲೈನ್‌ನಾಗ ಕೇಕ್ ಕಳಿಸಿ ಫೋನಿನಾಗ 'ಮೌಶಿ ನಿಂಗೂ ಕಂಗ್ರಾಟ್ಸ್. ಅಣ್ಣಾಗ 32 ವರ್ಷ. ಮಗ ಎಷ್ಟು ದೊಡ್ಡಂವಾದ ಅಂತ ನಿಂಗೂ ಖುಷಿಯಾಗಿರಬೇಕಲ್ಲ' ಅಂದಾಗ 'ಹಣೆಭಾರ' ಅಂತ ಬಡ್ಕೊಂಡೆ. ಕೇಕು ಕತ್ತರಿಸಿದಾಗ '**Age is a just number**' ಅಂತ ಯಾಂವಂದಾನಲ್ಲss ... ಅಂವ ನನ್ನ ಕೈಯಾಗ ಸಿಗಬೇಕಿತ್ತು. ಕೇಕು ಛಂದಿತ್ತು. ಮನಸ್ಸಿನಾಗ ಕಸಿವಿಸಿ ಆದರೂ ಜಾಸ್ತಿನೇ ತಿಂದಿದ್ದೆ.

'ಆಗದು ಎಂದು' ಅಣ್ಣಾವ್ರ ಹಾಡನ್ನೇ ಮಹಾಮಂತ್ರ ಮಾಡಿಕೊಂಡು ಇಡೀ ಕರ್ನಾಟಕ ಜಾಲಾಡಿಬಿಟ್ಟೆ. ಕೊನಿಗೆ ಒಂದೇ ವರ್ಷದಾಗ ಕಲ್ಯಾಣ ಕರ್ನಾಟಕದ ಕನ್ಯಾಗಳನ್ನೆ ಹುಡುಕಿ ಎರಡೂ ಮಕ್ಕಳ ಲಗ್ನಾ ಮಾಡಿಬಿಟ್ಟೆ.

ಪ್ರತಿಕ್ರಿಯಿಸಿ: **feedback@sudha.co.in**

ಕಳೆದ ವಾರದ 'ಚೆನ್ನುಡಿ'
ಧರಿನಾಡಿನ ಮಾತು–ಕತಿ
ಕೇಳಿ ಬಿ.ಜೆ. ಪಾರ್ವತಿ
ವಿ. ಸೋನಾರೆ
ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

